ಓ ಎಸ್ ನಂಃ 242/2021
ಪಿ. ಡಬ್ಲ್ಯೂ- 1

**(ಇಂದು ದಿನಾಂಕ 11-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ದಾವಾ ಆಸ್ತಿಯನ್ನು ರೂ.12 ಲಕ್ಷ ಕಡಿಮೆ ಬೆಲೆಗೆ ಮಾರಾಟ ಮಾಡಲು ಇಚ್ಛೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಲದ ಭದ್ರತೆ ದಾಖಲೆ ಬರೆಯಿಸಿಕೊಂಡು ಸುಳ್ಳು ನೋಟಿಸ ನೀಡಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ರಿಂದ 9 ದಾಖಲೆಗಳು ನನ್ನ ಮತ್ತು ನನ್ನ ಸಹೋದರನ ಹೆಸರಿನಲ್ಲಿ ಇರುತ್ತವೆ. ದಾವಾ ಆಸ್ತಿಯನ್ನು ನುಂಗಿಹಾಕುವ ಉದ್ದೇಶದಿಂದ ಹಾಗೂ ಅದನ್ನು ಭೂಪರಿವರ್ತನೆ ಮಾಡಿಸಿ ಅದರ ಲಾಭ ಪಡಿಯಬೇಕು ಎಂದು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಇವತ್ತಿಗೆ ಪ್ರತಿ ಗುಂಟೆಗೆ ರೂ.8 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ಸಾಲದ ಭದ್ರತೆ ದಾಖಲೆ ಆಗಿರುತ್ತದೆ ಮತ್ತು ಪ್ರತಿವಾದಿ ಈಗಾಗಲೇ ಬಹುಪಾಲು ಹಣವನ್ನು ಮರುಪಾವತಿ ಮಾಡಿರುತ್ತಾರೆ ಉಳಿದ ಹಣವನ್ನು ಮರುಪಾವತಿ ಮಾಡಲು ಈಗಲು ಸಿದ್ದರಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ಕೆಳಿದ ಯಾವುದೇ ಪರಿಹಾರಕ್ಕೆ ಅರ್ಹನೀರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.